ಪ್ರಸಾದ್‌ರವರು ಪ್ರಸ್ತಾಪ ಮಾಡಿರುವಂತೆ, ತಾಳವಾಡಿಯಲ್ಲಿ ಕನ್ನಡ ಶಾಲೆಗಳಲ್ಲಿ ಮತ್ತು ತಮಿಳುನಾಡಿನ border ನಲ್ಲಿರತಕ್ಕಂಥ ಕನ್ನಡ ಶಾಲೆಗಳಿಗೆ ಕನ್ನಡಕ್ಕೆ ಇದ್ದಂತಹ 100 ಮಾರ್ಕ್ಸ್‌ಗಳನ್ನು 50 ಮಾರ್ಕ್ಸ್‌ಗಳಿಗೆ ಇಳಿಸಿರತಕ್ಕಂಥದ್ದನ್ನು ಸರ್ಕಾರ ಗಂಭಿರವಾಗಿ ಪರಿಗಣಿಸುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಯವರಿಂದ ಆ ರಾಜ್ಯದ ಮುಖ್ಯಮಂತ್ರಿಯವರ ಜೊತೆ ಮಾತನಾಡಿಸುವುದರ ಜೊತೆಯಲ್ಲಿ ಪತ್ರವನ್ನೂ ಕೂಡ ಬರೆದು, ನಮ್ಮ ಕನ್ನಡಿಗರಿಗೆ ಅನ್ಯಾಯವಗದ ರೀತಿಯಲ್ಲಿ, ಮೊದಲು ಯಾವ ರೀತಿ ಕನ್ನಡಕ್ಕೆ ಸ್ಥಾನಮಾನ ಇತ್ತು ಅದೇ ಸ್ಥಾನವನ್ನು ಮುಂದುವರೆಸಿಕೊಂಡು ಹೋಗುವು-ದಕ್ಕೆ ಸರ್ಕಾರ ಗಂಭೀರವಾಗಿ ಪ್ರಯತ್ನ ಮಾಡುತ್ತದೆ.

ಶ್ರಿ ಹೆಚ್.ಎಸ್.ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಸಂಬಂಧಪಟ್ಟಿ ಆದೇಶಪತ್ರಗಳನ್ನು ಕೊಡುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ : ಅದನೆಲ್ಲ ಮಾಡುತ್ತೇವೆ.

ಅಧ್ಯಕ್ಷರು : ಇಲ್ಲೇ ಇದೆ. ಮಾನ್ಯ ನೆ.ಲ.ನರೇಂದ್ರಬಾಬುರವರು ಮಾತನಾಡುವುದು.

3. ವಿಷಯ : ಆಧಾರ್ ಕಾರ್ಡ್ ಪಡೆಯುವಲ್ಲಿ ಆಗುತ್ತಿರುವ ತೊಂದರೆಯನ್ನು ಸರಿಪಡಿಸುವ ಬಗ್ಗೆ.

ಶ್ರೀ ನೆ.ಲ.ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮಹಾನಗರದಲ್ಲಿ residential area ದಲ್ಲಿ ಜನರು ಆಧಾರ್ ಕಾರ್ಡ್ ತೆಗೆದುಕೊಳ್ಳಬೇಕೆನ್ನುವ messages ಅನ್ನು ಗ್ಯಾಸ್ ಕಂಪನಿಯವರು spread ಮಾಡಿದ್ದಾರೆ. ನನ್ನ ಮತಕ್ಷೇತ್ರದಲ್ಲಿ 4 ಲಕ್ಷ ಜನಸಂಖ್ಯೆ ಇದೆ. ಈಗ 3 ಸೆಂಟರ್‌ಗಳು ಇವೆ. ಪ್ರತಿನಿತ್ಯ ಹೆಂಗಸರು ಮಕ್ಕಳನ್ನು ಎತ್ತಿಕೊಂಡು ಬೆಳಗ್ಗೆ 4 ಗಂಟೆಗೇ ಬಂದು ಕುಳಿತುಕೊಳ್ಳುತ್ತಾರೆ. ಅವತ್ತು ಯಾವ ಸ್ಥಿತಿಯಾಗಿದೆ ಎಂದರೆ, ಅಲ್ಲಿ ಪೊಲೀಸ್ ಬಂದು control ಮಾಡಲು ಆಗದ ಸ್ಥಿತಿಯಾಗಿದೆ. ದಯವಿಟ್ಟು ಹೆಚ್ಚು ಕೇಂದ್ರಗಳನ್ನು ಮಾಡಿ. ಪರೀಕ್ಷೆಗಳಿವೆ, ಶಾಲಾ ಮಕ್ಕಳ ಸಮೇತ ಬರುತ್ತಿದ್ದಾರೆ. ಶಾಲೆಗಳಲ್ಲಿ, ಆಫೀಸ್‌ಗಳಲ್ಲಿ, ಮೊಬೈಲ್ ಸೆಂಟರ್‌ಗಲಿಗೆ ಹೋಗಿ ಅಥವ ಅಪಾರ್ಟ್‌ಮೆಂ-ಟ್‌ಗಳಲ್ಲಿ ವಯಸ್ಸಾದವರು ಅವರೂ ಬಂದು ನಿಂತುಕೊಂಡಿರುವುದನ್ನು ನೋಡಿದರೆ ನಿಜವಾಗಿಯೂ ನರಕ ಯಾತನೆಯಾಗುತ್ತಿದೆ. ಒಂದು ದಿವಸಕ್ಕೆ

ಒಂದು family ಗೆ ಒಂದು ಕಾರ್ಡ್ ಕೊಡುತ್ತಾರೆ. ಇಡೀ family ಬರುತ್ತಾರೆ ಬಹಳ ಅವ್ಯವಸ್ಥೆ ಆಗುದೆ. ದಯವಿಟ್ಟು ಸೆಂಟರ್‌ಗಳನ್ನು ಹೆಚ್ಚು ಮಾಡಿ. ದಿನಾಂಕ ನಿಗದಿಪಡಿಸಿರುವ ಗ್ಯಾಸ್ ಕಂಪನಿಗಳಿಗೆ ದಯವಿಟ್ಟು ಎಚ್ಚರಿಕೆ ಕೊಡಿ. ಜನರೆಲ್ಲಾ ಬರುವುದಕ್ಕೆ ಶುರು ಮಾಡಿದ್ದಾರೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ಆಧಾರ್ ಕಾರ್ಡ್ ಕೊಡಲಿಕ್ಕೆ ಶಾಲಾ ಕಾಲೇಜುಗಳಿಗೆ ಮೊಬೈಲ್ ವ್ಯಾನ್‌ಗಳಲ್ಲಿ ಹೋಗಬೇಕು. Apartment ಆದರೆ with appointment ಹೋಗುವಂತಹ ವ್ಯವಸ್ಥೆ ಆಗಬೇಕು. ಹೆಚ್ಚು ಕೇಂದ್ರಗಳನ್ನು ತೆರೆಯುವಂತಹ ವ್ಯವಸ್ಥೆ ಆಗಬೇಕು. ಜನರಿಗೆ ಆತಂಕ, ಭೀತಿ, ಈ ಅವ್ಯಚಸ್ಥೆಯನ್ನು ಸರಿಪಡಿಸಲು ಸರ್ಕಾರದವರು ಏನು ಕ್ರಮ ತೆಗೆದುಕೊಂಡುದ್ದಾರೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಏನು ಮಾನ್ಯ ಸದಸ್ಯರಾದ ನರೇಂದ್ರ ಬಾಬುರವರು ಬೆಮಗಳೂರಿನಲ್ಲಿ ಈ ಆಧಾರ್ ಕಾರ್ಡ್‌ಗಳನ್ನು ಪಡೆದುಕೊಳ್ಳುವುದರಲ್ಲಿ ಆಗುತ್ತಿರುವ ತೊಂದರೆಯನ್ನು ಸದನದ ಗಮನವನ್ನು ಸೆಳೆದಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಈಗಾಗಲೇ ಒಂದು detail ಉತ್ತರವನ್ನು ನಾನು ಕೊಟ್ಟಿದ್ದೇನೆ. ಅವರ ಒಂದು ಅನಿಸಿಕೆಯ ರಿತಿಯಲ್ಲಿ ಇವತ್ತು 56 ಆಧಾರ್ ನೋಂದಣಿ ಕೇಂದ್ರಗಳಲ್ಲಿ 252 ನೋಂದಣಿ ಕಿಟ್‌ಗಳು ಏನಿವೆ, ಅದನ್ನು ನಾವು 600 ಕಿಟ್‌ಗಳಾಗಿ ಹೆಚ್ಚಿಸುತ್ತಿದ್ದೇವೆ. ಎರಡನೆಯದು, ಹೆಚ್.ಪಿ. ಗ್ಯಾಸ್‌ನವರು ಫೆಬ್ರವರಿ 15 ನೇ ತಾರೀಖಿನೊಳಗಾಗಿ ನೀವು ಆಧಾರ್ ಕಾರ್ಡ್ ಅನ್ನು produce ಮಾಡಬೇಕೆಂದು ಹೇಳಿದ್ದಾರೆ. ಇಲ್ಲದೇ ಹೋದರೆ discontinue ಆಗುತ್ತದೆ ಎಂದು ನೋಟಿಸ್ ಕೊಟ್ಟಿರುವುದು ನಮ್ಮ ಗಮನಕ್ಕೆ ಬಂದಿದೆ. ಇದು ಮೈಸೂರು, ಕಾರವಾರ ಮತ್ತು ತುಮಕೂರು, ಈ ಮೂರು ಜಿಲ್ಲೆಗಳಲ್ಲಿ ಮಾತ್ರ apply ಆಗುತ್ತದೆ. ಬೆಂಗಳೂರಿಗೆ ಯಾವುದೇ ರೀತಿ ಫೆಬ್ರವರಿ 15 ಎಂದು embargo ಹಾಕಿದ್ದಾರಲ್ಲ, ಅದು apply ಆಗುವುದಿಲ್ಲ. ಅದರ ಬಗ್ಗೆ ಹೆಚ್.ಪಿ. ಕಂಪನಿಯವರಿಗೂ ಆದೇಶ ಕೊಡುತ್ತೇವೆ. ಒಂದು general clarification ಅನ್ನು issue ಮಾಡುತ್ತೇವೆ. ಅದರ ಜೊತೆಗೆ ಬೆಂಗಳೂರಿನಲ್ಲಿ ವಿಶೇಷವಾಗಿ, ಮಾನ್ಯ ನರೇಂದ್ರಬಾಬುರವರು ಹೇಳಿದ ಹಾಗೆ, ಬೆಲಗ್ಗೆ 4.00 ಗಂಟೆಗೆ

ಹೋಗಿ ಮಕ್ಕಳನ್ನೆಲ್ಲಾ ನಿಲ್ಲಿಸುವುದು ಆಗುತ್ತಿದೆ. ಇದನ್ನು ತಪ್ಪಿಸುವುದಕ್ಕೋಸ್ಕರ ಒಂದು ಟೋಕನ್ ವ್ಯವಸ್ಥೆಯನ್ನೂ ಮಾಡುತ್ತಿದ್ದೇವೆ. ಇನ್ನೂ ಕೆಲವು ಕಡೆ by appointments, ಅವರಿಗೆ ಮುಂಚೆಯೇ ಹೋಗಿ ತಿಳಿಸಿ, ಆಗ ಅವರು ಹೋಗಿ ಆಧಾರ್ ಕಾರ್ಡ್ ತೆಗೆದುಕೋಳ್ಳುವಂತಹ ವ್ಯವಸ್ಥೆ ನಾವು ಮಾಡುತ್ತೇವೆ. ಯಾವುದೇ ರೀತಿ ನಾಗರಿಕರಿಗೆ ತೊಂದರೆಯಾಗುವುದನ್ನು ನಿಲ್ಲಿಸುವುದಕ್ಕೆ ಸರ್ಕಾರದಿಂದ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಮಾನ್ಯ ಶ್ರೀ ಸೋಮಲಿಂಗಪ್ಪನವರು ಹಾಜರಿಲ್ಲ. ಶ್ರೀ ಶ್ರೀಕಾಂತ್ ಕುಲಕರ್ಣಿಯವರು ಮಾತನಾಡುವುದು.

4. ವಿಷಯ : ಜಮಖಂಡಿ ತಾಲ್ಲೂಕಿನ ಕೃಷ್ಣಾನದಿಯ ಎಡದಂಡೆ ಭಾಗದಲ್ಲಿ ಅತಿಯಾದ ನೀರಿನ ಬಳಕೆಯಿಂದ ಆಗಿರುವಂತಹ ಸವಳು–ಜವಳು ಕಡಿಮೆ ಮಾಡುವ ಬಗ್ಗೆ.

ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ) : ಮಾನ್ಯ ಅಧ್ಯಕ್ಷರೆ, ನಾನು ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿಯ ಎಡದಂಡೆ ಭಾಗದಲ್ಲಿ ಅತಿಯಾದ ನೀರಿನ ಬಳಕೆಯಿಂದ ಆಗಿರುವಂತಹ ಸವಳು–ಜವಳು ಕಡಿಮೆ ಮಾಡುವ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡು, ಆ ಭೂಮಿಯ ಫಲವತ್ತತೆಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ, ಬೆಳಗಾಂನ ಕಾಡಾ (CADA) ಎನ್ನುವ ಸಂಸ್ಥೆಗೆ ವ್ಯಾಪ್ತಿಯಲ್ಲಿರದ ವಿಷಯ ನಾನು ಮಾನ್ಯ ನೀರಾವರಿ ಮಂತ್ರಿಗಳ ಗಮನಕ್ಕೆ ತಂದ ನಂತರ, ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿ ಈ ಒಂದು ಪ್ರದೇಶವನ್ನೂ ಜೋಡಿಸಿದ್ದರಿಂದ ಸಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಆ ಒಂದು ಭಾಗದಲ್ಲಿ ಸವಳು–ಜವಳು ತೆಗೆಯುವ ಸಲುವಾಗಿ ಸುಮಾರು 6–7 ಕೋಟಿ ರೂ.ಗಳ ಯೋಜನೆ ಆಗಿದೆ. ಅದನ್ನು ತಕ್ಷಣ ಕಾರ್ಯರೂಪಕ್ಕೆ ತಂದರೆ, ಇವತ್ತು ಸುಮಾರು ಸಾವಿರಾರು ಎಕರೆ ಜವಳಿನಿಂದ ಬಳಲುವ ಭೂಮಿ, ಪುನಃ ತನ್ನ ಫಲವತ್ತತೆಯನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಪ್ರಸಕ್ತ ಸಾಲಿನಲ್ಲಿಯೇ ಆ ಒಂದು ಕ್ರಿಯೆಯನ್ನು ಮಾಡಿ, ಆ ಸವಳು–ಜವಳು ತೆಗೆಯುವಂತಹ ಕಾರ್ಯಕ್ರಮದಲ್ಲಿ ಅದನ್ನು ಸಂಪೂರ್ಣ ಜಾರಿಗೆ ತರಬೇಕೆನ್ನುವ ದೃಷ್ಟಿಯಿಂದ